ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ :: ರಾಮನಗರ ವಿಭಾಗ :: ರಾಮನಗರ

ಸಂ:ಕರಾಸಾ:ರಾನವಿ:ಸಂ:ವಾ: 2016:16–17 ದಿನಾಂಕ:05.08:2016

ಇ–ಹರಾಜು/ಟೆಂಡರ್ ಪ್ರಕಟಣೆ ಸಂ:05/2016–17

ಕರಾರಸಾ ಸಂಸ್ಥೆ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ ಇವರು ಈ ಕೆಳಕಂಡ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ ಮುಂದೆ ಖಾಲಿಯಾಗುವ ವಾಣಿಜ್ಯ ಮಳಿಗೆಗಳಿಗೆ 05 ವರ್ಷಗಳವರೆಗೆ ಮತ್ತು ತೆರೆದ ಮಳಿಗೆ 03 ವರ್ಷಗಳವರೆಗೆ ಪರವಾನಿಗೆ ನೀಡಲು ಉದ್ದೇಶಿಸಲಾಗಿದೆ. ಪರವಾನಿಗೆ ನೀಡಲು ಇ–ಹರಾಜು/ಟೆಂಡರ್ ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ಈ ಪ್ರಕಟಣೆಯನ್ನು ಹೊರಡಿಸಲಾಗಿರುವ ವಿವರಗಳು ಈ ಕೆಳಕಂಡಂತಿದೆ.

ಕ್ರ ಸಂ	ಬಸ್ ನಿಲ್ದಾಣದ ಹೆಸರು	ಮಳಿಗೆಯ ಹೆಸರು/ಫಲಕಗಳ ಸಂಖ್ಯೆ ವಿವರ	ವಿಸ್ತೀರ್ಣ (ಚದರ ಅಡಿಗಳು)	ಮಿತವ್ಯಯ ಮಾಸಿಕ ಶುಲ್ಕ (ರೂ)	ಇ.ಎಂ.ಡಿ ಮೊತ್ತ (ರೂ)
1	ಚನ್ನಪಟ್ಟಣ	ಜನರಲ್ ಮಳಿಗೆ (ಸಂ:15 'ಎ') (ಮೈಸೂರು ರಸ್ತೆ ಕಡೆ)	83	18302/–	54906/–
2	ಚನ್ನಪಟ್ಟಣ	ಜನರಲ್ ಮಳಿಗೆ (ಸಂ:15 'ಬಿ') (ಪ್ಲಾಟ್ ಫಾರಂ ಕಡೆ)	83	18302/–	54906/–
3	ಆನೇಕಲ್	ಜನರಲ್ ಮಳಿಗೆ (ಸಂ:04) (ಪರಿಶಿಷ್ಠ ಜಾತಿಗೆ ಮೀಸಲು) (ದಿ:21.09.2016 ರಿಂದ ಜಾರಿಗೆ ಬರುವಂತೆ)	62	6589/–	19767/–
4	ಆನೇಕಲ್	ದೂರವಾಣಿ & ಮೊಬೈಲ್ ರೀಚಾರ್ಜಿಂಗ್ ಬೂತ್ (ತೆರೆದ ಸ್ಥಳ) (ಅಂಗವಿಕಲರಿಗೆ ಮೀಸಲು) (ದಿ:13.09.2016 ರಿಂದ ಜಾರಿಗೆ ಬರುವಂತೆ)	12	968/–	2904/–
5	ಚನ್ನಪಟ್ಟಣ	ಜನರಲ್ ಮಳಿಗೆ (ಸಂ:10) (ಅಂಗವಿಕಲರಿಗೆ ಮೀಸಲು) (ದಿ:01.01.2017 ರಿಂದ ಜಾರಿಗೆ ಬರುವಂತೆ)	166	24890/–	74670/–
6	ಚನ್ನಪಟ್ಟಣ	ಜನರಲ್ ಮಳಿಗೆ (ಸಂ:ಎಫ್–12) (ಮಹಡಿ ಮಳಿಗೆ)(ಪರಿಶಿಷ್ಠ ಪಂಗಡಕ್ಕೆ ಮೀಸಲು) (ದಿ:11.11.2016 ರಿಂದ ಜಾರಿಗೆ ಬರುವಂತೆ)	166	3294/–	9882/–

*** ಸೂಚನೆಗಳು:–**

1) ಪ್ರತಿ ವರ್ಷ ಹಿಂದಿನ ಪರವಾನಗಿ ಶುಲ್ಕದ ಮೇಲೆ ಶೇ.10%ರಷ್ಟು ಹೆಚ್ಚಾಗುವುದು.
2) ಜನರಲ್ ಸ್ಟಾಲ್ ಮಳಿಗೆಗೆ ಆಯ್ಕೆಗೊಳ್ಳುವ ಪರವಾನಗಿದಾರರು ಜನರಲ್ ಸ್ಟಾಲ್‌ಗೆ ಸಂಬಂಧಪಟ್ಟ ವ್ಯಾಪಾರವನ್ನು ಮಾತ್ರ ಮಾಡಲು ಅವಕಾಶವಿರುತ್ತದೆ.
3) ಮಳಿಗೆಯಲ್ಲಿ ಮಾರಾಟ ಮಾಡುವ ಆಹಾರ, ತಿಂಡಿ ಪದಾರ್ಥ ಸಾಮಾಗ್ರಿ, ನೀರಿನ ಪೊಟ್ಟಣ ಇತ್ಯಾದಿ ವಸ್ತುಗಳನ್ನು ತಯಾರಕರು, ನಿರ್ದಿಷ್ಟಪಡಿಸಿದ ಬೆಲೆಗೆ ಮಾರಾಟ ಮಾಡುವುದು.
4) ಹರಾಜು/ಟೆಂಡರ್/ಸಂಧಾನ ಪ್ರಕಟಣೆಯಲ್ಲಿ ಆಯ್ಕೆಯಾದವರು ತಮ್ಮ ಸ್ವಂತ ಖರ್ಚಿನಲ್ಲಿ ಕರ್ನಾಟಕ ಸ್ಟಾಂಪ್ ಆಕ್ಟ್ 1957 ಸೆಕ್ಷನ್ 32ಎ (ಎ)(111)ರಲ್ಲಿ ಪರಿಷ್ಕೃತ ಸ್ಟಾಂಪ್ ಅಕ್ಟ್ ನಂ:8/2003ರನ್ವಯ ಸ್ಟಾಂಪ್ ಶುಲ್ಕವನ್ನು ಭರಿಸಿ ಕರಾರು ಮಾಡಿಕೊಳ್ಳಬೇಕಾಗಿರುತ್ತದೆ.
5) ಆಯ್ಕೆಗೊಂಡ ಪರವಾನಗಿದಾರರು ನಿಗಮದ ನಿಯಮಾವಳಿಯ ಪ್ರಕಾರ ಸೂಚಿಸಿರುವ ಪರವಾನಗಿ ಶುಲ್ಕದ 6ರಷ್ಟು ಹಣವನ್ನು ಭದ್ರತಾ ಠೇವಣಿ ಹಣ ಮತ್ತು ಒಂದು ತಿಂಗಳ ಮುಂಗಡ ಮಾಸಿಕ ಪರವಾನಗಿ ಶುಲ್ಕವನ್ನು ಏಳು ದಿನಗಳೊಳಗೆ ವಿಭಾಗೀಯ ಕಛೇರಿಯಲ್ಲಿ ಸಂದಾಯ ಮಾಡಿ ನಿಗಮದೊಂದಿಗೆ ಕರಾರು ಒಪ್ಪಂದವನ್ನು ಮಾಡಿಕೊಳ್ಳಲು ಬದ್ಧರಾಗಿರಬೇಕು . ನಿಗದಿತ ಅವಧಿಯಲ್ಲಿ ಕರಾರು ಒಪ್ಪಂದವನ್ನು ಮಾಡಿಕೊಳ್ಳಲು ವಿಫಲರಾದಲ್ಲಿ ತಾತ್ಕಾಲಿಕ ಪರವಾನಗಿ ಆಯ್ಕೆಯನ್ನು ರದ್ದುಪಡಿಸಿ ತಾವು ಸಲ್ಲಿಸಿರುವ ಇಎಂಡಿ., ಹಣವನ್ನು ಸಂಸ್ಥೆಗೆ ಮುಟ್ಟುಗೋಲು ಮಾಡಿಕೊಳ್ಳಲಾಗುವುದು.
6) ಆಯ್ಕೆಗೊಂಡ ಪರವಾನಗಿದಾರರು ಪಾವತಿಸುವ ಮಾಸಿಕ ಪರವಾನಿಗೆ ಶುಲ್ಕದ ಮೇಲೆ ಶೇ.15.00%ರಷ್ಟು ಸೇವಾ ತೆರಿಗೆಯನ್ನು ಪ್ರತಿ ತಿಂಗಳು ಪರವಾನಿಗೆ ಶುಲ್ಕದ ಜೊತೆಗೆ ಪಾವತಿಸಲು ಬದ್ಧರಾಗಿರಬೇಕು. ಹಾಗೂ ತಮ್ಮ ಮಳಿಗೆಯಲ್ಲಿ ಬೆಂಕಿ ನಂದಿಸುವ ಉಪಕರಣಗಳನ್ನು ಇಟ್ಟುಕೊಳ್ಳಬೇಕು ಮತ್ತು ಬೆಂಕಿ ವಿಮೆಯನ್ನು ಮಾಡಿಸಿಕೊಳ್ಳಬೇಕು.
7) ಭಾರತ ಸರ್ಕಾರ/ಕರ್ನಾಟಕ ಸರ್ಕಾರ/ಕರಾರಸಾ ನಿಗಮವು ಆಗಿಂದಾಗ್ಗೆ ವಿಧಿಸುವ ಷರತ್ತು/ನಿಬಂಧನೆಗಳಿಗೆ ಪರವಾನಗಿದಾರರು ಬದ್ದರಾಗಿರಬೇಕು.
8) ನಿಗಮದ ಕಪ್ಪು ಪಟ್ಟಿಯಲ್ಲಿ ಇರುವ ವ್ಯಕ್ತಿಯು ಹರಾಜು/ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಲ್ಲ.
9) ವಾಣಿಜ್ಯ ಮಳಿಗೆಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ಮುಂದುವರೆದಂತೆ–2–

10) ಕರಾರು ಒಪ್ಪಂದ ಮಾಡಿಕೊಳ್ಳುವ ಸಮಯದಲ್ಲಿ ಸೇಲ್ಸ್ ಟ್ಯಾಕ್ಸ್ ಕ್ಲಿಯರೆನ್ಸ್ ಸರ್ಟಿಫಿಕೇಟ್ ನೀಡುವುದು.

11) ಮಳಿಗೆಯ ನೀರಿನ/ವಿದ್ಯುತ್ ಶುಲ್ಕವನ್ನು ಪ್ರತಿ ತಿಂಗಳು ಪರವಾನಗಿ ಶುಲ್ಕದೊಂದಿಗೆ ಘಟಕದಲ್ಲಿ ಪರವಾನಗಿದಾರರೇ ಪಾವತಿಸುವುದು.

12) ಆಯ್ಕೆಗೊಂಡ ಪರವಾನಿಗೆದಾರರು ಮಳಿಗೆಯನ್ನು ಸ್ವತ:ನಡೆಸುವುದಲ್ಲದೆ ಪರಬಾರೆ ಮಾಡುವಂತಿಲ್ಲ.

13) ಆಯ್ಕೆಗೊಂಡ ಪರವಾನಿಗೆದಾರರು ಕರಾರು ಒಪ್ಪಂದವನ್ನು ಮಾಡಿಕೊಂಡ ನಂತರವೇ ವಿಫಲರಾದ ಬಿಡ್‌ದಾರರ ಇಎಂಡಿ., ಹಣವನ್ನು ಹಿಂತಿರುಗಿಸಲಾಗುವುದು.

14) ಆಯ್ಕೆಗೊಂಡ ಪರವಾನಗಿದಾರರು ಚಾಲ್ತಿಯಲ್ಲಿರುವ ಮಾಸಿಕ ಪರವಾನಗಿ ಶುಲ್ಕವನ್ನು ಆ ತಿಂಗಳ 07ನೇ ತಾರೀಖಿನೊಳಗೆ ಮತ್ತು ಸೇವಾ ತೆರಿಗೆ ಶುಲ್ಕವನ್ನು 2ನೇ ತಾರೀಖಿನೊಳಗೆ ಸಂಬಂಧಪಟ್ಟ ಘಟಕಗಳಲ್ಲಿ ಮುಂಗಡವಾಗಿ ಸಂದಾಯ ಮಾಡಬೇಕು. ಸಂಬಂಧಪಟ್ಟ ಘಟಕಗಳಲ್ಲಿ ಮುಂಗಡವಾಗಿ ಸಂದಾಯ ಮಾಡಬೇಕು.

15) ಶಾಶ್ವತ ವಾಣಿಜ್ಯ ಮಳಿಗೆಗಳನ್ನು ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ ನೀಡಲಾಗುವುದು

16) ಇ–ಹರಾಜು/ಟೆಂಡರ್ ಭಾಗವಹಿಸುವ ಆಸಕ್ತರು ಪ್ರತ್ಯೇಕವಾಗಿ ನಿಗಧಿಪಡಿಸಿರುವ ಇಎಂಡಿ., ಹಣವನ್ನು ನಿಗಧಿತ ಅವಧಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ನಿಗಮಕ್ಕೆ ಸಲ್ಲಿಸಬೇಕು.

17) ಮಳಿಗೆಗಳಲ್ಲಿ ನಿಗಮವು ನಿರ್ಬಂದಿಸಿದ ವ್ಯವಹಾರ ಹಾಗೂ ಕಾನೂನು ಬಾಹಿರ ವ್ಯವಹಾರವನ್ನು ಮಾಡಲು ಅವಕಾಶವಿರುವುದಿಲ್ಲ.

18) ಆಯ್ಕೆಗೊಂಡ ಪರವಾನಗಿದಾರರು ಅವರ ಸಿಬ್ಬಂದಿಗಳ ಪಿಎಫ್ ಮೊತ್ತವನ್ನು ನಿಯಮಾವಳಿಗಳನ್ವಯ ಕಡಿತಗೊಳಿಸಿ ಸಂಬಂಧಪಟ್ಟ ಇಲಾಖೆಯಲ್ಲಿ ಪಾವತಿಸಿ ದಾಖಲೆಗಳನ್ನು ಪಡೆಯುತ್ತಿರುವ ಬಗ್ಗೆ ಕೆಎಸ್‌ಆರ್‌ಟಿಸಿ., ಅಧಿಕಾರಿಗಳು ಪರಿಶೀಲನೆಗೆ ಕೇಳಿದಾಗ ಪ್ರಸ್ತುತಪಡಿಸಬೇಕಾಗಿರುತ್ತದೆ.

19) ಇ–ಹರಾಜು/ಟೆಂಡರ್‌ನಲ್ಲಿ ಭಾಗವಹಿಸುವ ಅರ್ಜಿದಾರರು ತಮ್ಮ ಫೋಟೋ ಮತ್ತು ವಿಳಾಸದ ಮೂಲ ಪ್ರತಿಯನ್ನು ನಿಗಧಿತ ಅವಧಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಆಫ್‌ಲೋಡ್ ಮಾಡಬೇಕು. (ಆಧಾರ ಕಾರ್ಡ್, ರೇಷನ್ ಕಾರ್ಡ್, ಚುನವಾಣಿ ಗುರುತ್ತಿನ ಕಾರ್ಡ್ ಇವುಗಳಲ್ಲಿ ಯಾವುದಾದರೂ ಒಂದರ ಮೂಲ ಪ್ರತಿ).

20) ಕ್ರಮ ಸಂ:03ರ ಆನೇಕಲ್ ಬಸ್ ನಿಲ್ದಾಣದ ಜನರಲ್ ಸ್ಟಾಲ್ (ಸಂಖ್ಯೆ.04), ಮಳಿಗೆಯನ್ನು ಪರಿಶಿಷ್ಟ ಜಾತಿಗೆ ಮೀಸಲಾಗಿರಿಸಿದ್ದು, ಪರಿಶಿಷ್ಟ ಜಾತಿಗೆ ಸೇರಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಯ ಸೂಕ್ತಾಧಿಕಾರಿಯವರಿಂದ ಇತ್ತೀಚಿಗೆ ಪಡೆದ ದೃಡೀಕರಣದ ಪತ್ರದ ಪ್ರತಿಯನ್ನು ನಿಗಧಿತ ಅವಧಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಆಫ್‌ಲೋಡ್ ಮಾಡಬೇಕು.

21) ಕ್ರಮ ಸಂಖ್ಯೆ:4 & 5ರ ವಾಣಿಜ್ಯ ಮಳಿಗೆಗಳು (ಆನೇಕಲ್ ಬಸ್ ನಿಲ್ದಾಣದ ದೂರವಾಣಿ & ಮೊಬೈಲ್ ರೀಜಾರ್ಜಿಂಗ್ ಬೂತ್‌ನ್ನು & ಚನ್ನಪಟ್ಟಣ ಬಸ್ ನಿಲ್ದಾಣದ ಜನರಲ್ ಮಳಿಗೆ (ಸಂ:10)ಯು ಅಂಗವಿಕಲರಿಗೆ ಮಾತ್ರ ಮೀಸಲಿರಿಸಲಾಗಿದೆ. ಅಂಗವಿಕಲ ಅರ್ಜಿದಾರರು ಕನಿಷ್ಠ ಶೇ.40/–ರಷ್ಟು ಅಂಗವಿಕಲತೆಯನ್ನು ಹೊಂದಿರಬೇಕು. ತಾಲ್ಲೂಕು ಆಥವಾ ಜಿಲ್ಲಾ ವೈದ್ಯಾಧಿಕಾರಿಗಳಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ನಿಗಧಿತ ಅವಧಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಆಫ್‌ಲೋಡ್ ಮಾಡಬೇಕು.

22) ಕ್ರಮ ಸಂ:06ರ ಚನ್ನಪಟ್ಟಣ ಬಸ್ ನಿಲ್ದಾಣದ ಜನರಲ್ ಮಳಿಗೆ (ಸಂ.ಎಫ್–12)ಯನ್ನು (ಮಹಡಿ ಮಳಿಗೆ) ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿರಿಸಿದ್ದು, ಪರಿಶಿಷ್ಟ ಪಂಗಡಕ್ಕೆ ಸೇರಿರುವ ಬಗ್ಗೆ ಸಂಬಂಧಪಟ್ಟ ಇಲಾಖೆಯ ಸೂಕ್ತಾಧಿಕಾರಿಯವರಿಂದ ಇತ್ತೀಚಿಗೆ ಪಡೆದ ದೃಡೀಕರಣದ ಪತ್ರದ ಪ್ರತಿಯನ್ನು ನಿಗಧಿತ ಅವಧಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಆಫ್‌ಲೋಡ್ ಮಾಡಬೇಕು.

23) ಇ.ಎಸ್.ಐ ಕಾಯ್ದೆಯ ವ್ಯಾಪ್ತಿಯಲ್ಲಿ ಬರುವ ವಾಣಿಜ್ಯ ಮಳಿಗೆಗಳ/ಸ್ಥಳಗಳ ಪರವಾನಗಿದಾರರುಗಳು ಇ.ಎಸ್.ಐ ಕೋಡ್‌ನ್ನು ಹೊಂದಿರಬೇಕು ಮತ್ತು ಅವರುಗಳ ವ್ಯಾಪ್ತಿಯಲ್ಲಿ ಬರುವ ನೌಕರರನ್ನು ಇ.ಎಸ್.ಐ, ವ್ಯಾಪ್ತಿಯಲ್ಲಿ ತರಬೇಕು ಹಾಗೂ ಕಾರ್ಡ್‌ನ್ನು ಕೊಡಿಸಬೇಕು. ನಿಗದಿತ ವಂತಿಗೆಯನ್ನು ಆನ್‌ಲೈನ್‌ನಲ್ಲಿ ಸಲ್ಲಿಸಬೇಕು ಮತ್ತು ಇ.ಎಸ್.ಐ ಸೌಲಭ್ಯಗಳನ್ನು ನೌಕರರಿಗೆ ಹಾಗೂ ಅವರ ಅವಲಂಭಿತರಿಗೆ ಸಿಗುವಂತೆ ಸಹಾಯ ಮಾಡಬೇಕು.

ರಾಮನಗರ ವಿಭಾಗದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ/ಮುಂದೆ ಖಾಲಿಯಾಗುವ ವಾಣಿಜ್ಯ ಮಳಿಗೆಗಳಿಗೆ ಅಳವಡಿಸುವ ಸಂಬಂಧ ಪರವಾನಗಿದಾರರನ್ನು ಆಯ್ಕೆ ಮಾಡಲು ದಿ:09.09.2016ರಂದು ಹರಾಜು/ಟೆಂಡರ್ ನಡೆಸಲು ನಿಗದಿಪಡಿಸಲಾಗಿರುತ್ತದೆ. ದಿ:08.08.2016 ರಿಂದ ಇ–ಟೆಂಡರ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ. ಹರಾಜು/ಟೆಂಡರ್ ದಸ್ತಾಮೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://www.eproc.Karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ದಿನಾಂಕ:07.09.2016ರ ಮಧ್ಯಾಹ್ನ 14:00 ಗಂಟೆಯವರೆಗೆ ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕಡೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ–562139ರಲ್ಲಿ ಸಂಪರ್ಕಿಸಲು ಕೋರಲಾಗಿದೆ. ದೂ.ಸಂ: 27272306 ಹಾಗೂ ಮೊಬೈಲ್ ಸಂ:77609 90852.

ಹರಾಜು/ಟೆಂಡರನ್ನು ನಡೆಸುವ ಮತ್ತು ರದ್ದುಪಡಿಸುವ ಹಾಗೂ ಅರ್ಜಿಗಳನ್ನು ತಿರಸ್ಕರಿಸುವ ಅಥವಾ ಮಾರ್ಪಡಿಸುವ ಅಧಿಕಾರವನ್ನು ನಿಗಮವು ಕಾಯ್ದಿರಿಸಿಕೊಂಡಿದೆ.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ
ರಾಮನಗರ ವಿಭಾಗ:ರಾಮನಗರ

ಪ್ರತಿಯನ್ನು ಗೌರವಪೂರ್ವಕವಾಗಿ:–

1) ನಿರ್ದೇಶಕರು (ಭ : ಜಾ), ಕರಾರಸಾ ಸಂಸ್ಥೆ. ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.
2) ನಿರ್ದೇಶಕರು (ಕಾ), ಕರಾರಸಾ ಸಂಸ್ಥೆ. ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.
3) ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ), ಕರಾರಸಾ ಸಂಸ್ಥೆ. ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ.
4) ವ್ಯವಸ್ಥಾಪಕರ ನಿರ್ದೇಶಕರು, ಬೆಂ.ಮ.ನ.ಸಾ.ಸಂಸ್ಥೆ/ವಾಕರಾರಸಾಸಂಸ್ಥೆ/ಈಕರಾರಸಾಸಂಸ್ಥೆ, ರವರ ಮಾಹಿತಿಗಾಗಿ.
5) ಮುಖ್ಯ ಗಣಕ ವ್ಯವಸ್ಥಾಪಕರು, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ , ಬೆಂಗಳೂರುರವರ ಮಾಹಿತಿಗಾಗಿ ಹಾಗೂ ಸದರಿ ಪ್ರಕಟಣೆಯನ್ನು ಕೆ.ಎಸ್.ಆರ್.ಟಿ., ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಲಾಗಿದೆ.
6) ಎಲ್ಲಾ ವಿಭಾಗ ನಿಯಂತ್ರಣಾಧಿಕಾರಿಗಳು, ಕ.ರಾ.ರ.ಸಾ.ನಿಗಮ, ರವರ ಮಾಹಿತಿಗಾಗಿ.

ಪ್ರತಿಯನ್ನು:–

1) ವಿಭಾಗ ಸಂಚಲನಾಧಿಕಾರಿ/ಭದ್ರತಾ & ಜಾಗೃತಾಧಿಕಾರಿ/ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ರಾಮನಗರ ವಿಭಾಗ:ರಾಮನಗರ ರವರ ಮಾಹಿತಿಗಾಗಿ ಹಾಗೂ ದಿನಾಂಕ:09.09.2016ರಂದು ತಪ್ಪದೇ ಭಾಗವಹಿಸಲು ತಿಳಿಸಲಾಗಿದೆ.
2) ಘಟಕ ವ್ಯವಸ್ಥಾಪಕರು (ಕನಕಪುರ:ಆನೇಕಲ್:ಚನ್ನಪಟ್ಟಣ:ಹಾರೋಹಳ್ಳಿ:ರಾಮನಗರ:ಮಾಗಡಿ) ಇವರ ಮಾಹಿತಿಗಾಗಿ ಹಾಗೂ ಸದರಿ ಪ್ರತಿಯನ್ನು ಘಟಕದ & ಬಸ್ ನಿಲ್ದಾಣದ ಸೂಚನಾ ಫಲಕದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.

ವಿಭಾಗೀಯ ನಿಯಂತ್ರಣಾಧಿಕಾರಿ
ರಾಮನಗರ ವಿಭಾಗ:ರಾಮನಗರ